37

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-6172/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 09/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಧನಂಜಯ್ ಆರ್ ಜಾದವ್, ಹೊನ್ನಿಹಾಳ ಗ್ರಾಮ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಧನಂಜಯ್ ಆರ್ ಜಾದವ್ ಇವರು ಈ ಸಂಸ್ಥೆಗೆ ದೂರೊಂದನ್ನು ನೀಡಿ, ಅನಧೀಕೃತವಾಗಿ ಸಾಗಣೆಯಾಗುತ್ತಿದ್ದ ಮರಳನ್ನು ಬೆಳಗಾವಿಯ ಸರ್ಕ್ಯೂಟ್ ಹೌಸ್ ಆವರಣದಲ್ಲಿ ದಾಸ್ತಾನುಗೊಳಿಸಲಾಗಿದ್ದು, ಜಪ್ತಿಮಾಡಿ ಸಂಗ್ರಹಿಸಿದ್ದ ಮರಳು ಅಂದಾಜು 300 ಟ್ರಕ್ಕುಗಳಷ್ಟಾಗಿದ್ದು, ಅದು ಸದರಿ ಜಾಗದಿಂದ ಕಾಣೆಯಾಗಿರುತ್ತದೆ. ಸದರಿ ಮರಳನ್ನು ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡಲು ಸರ್ಕ್ಯೂಟ್ ಹೌಸ್‌ನಲ್ಲಿ ಶೇಖರಿಸಿಡಲಾಗಿತ್ತು. ಸುಮಾರು 4.50 ಕೋಟಿ ಬೆಲೆಬಾಳುವ ಮರಳಾಗಿತ್ತೆಂದು, ಈ ಬಗ್ಗೆ ವಿಜಯವಾಣಿ ದಿನಪತ್ರಿಕೆಯಲ್ಲಿ ಜಪ್ತಿ ಮಾಡಿರುವ ಮರಳು ನಾಪತ್ತೆ ಎಂಬ ಶೀರ್ಷಿಕೆಯಲ್ಲಿ ವರದಿಯಾಗಿತ್ತು. ಆದ್ದರಿಂದ, ಇದಕ್ಕೆ ಜವಾಬ್ದಾರಿಯುತರಾದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪವಿಭಾಗ, ಬೆಳಗಾವಿ ಇವರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ಸದರಿ ಮರಳು ಸಕ್ಯೂಟ್ ಹೌಸ್‌ನಲ್ಲಿ ಶೇಖರಿಸಲಾಗಿದ್ದು, ಅದರ ಜವಾಬ್ದಾರಿಯನ್ನು ಶ್ರೀ ಎಂ.ಎಸ್. ಕಾವಳೆಕರ್, ಸಹಾಯಕ ಅಭಿಯಂತರರು ಇವರಿಗೆ ಜವಾಬ್ದಾರಿ ವಹಿಸಿಕೊಡಲಾಗಿತ್ತು. ನಂತರ ಶೇಖರಣೆ ಮಾಡಲಾಗಿದ್ದ ಮರಳಿನ ಪರಿಮಾಣದಲ್ಲಿ ವ್ಯತ್ಯಾಸ ಕಂಡು ಬಂದಿದ್ದರಿಂದ ಈ ಬಗ್ಗೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರಿಗೆ ಪತ್ರ ಬರೆದು, ಮರಳಿನ ಪ್ರಮಾಣದಲ್ಲಿ ಕಂಡು ಬಂದಿರುವ ಕೊರತೆಗೆ ಸಂಬಂಧಿಸಿದಂತೆ ಶ್ರೀ ಎಂ.ಎಸ್. ಕಾವಳೆಕರ್ ರವರು ಜವಾಬ್ದಾರಿಯುತರಾಗಿರುತ್ತಾರೆಂದು, ಆದ್ದರಿಂದ,

ತಿಳಿಸಿರುತ್ತಾರೆ.

3. ಈ ಹಂತದಲ್ಲಿ ಶ್ರೀ ಎಂ.ಎಸ್. ಕಾವಳೆಕರ್ ರವರನ್ನು 2ನೇ ಎದುರುದಾರರೆಂದು ಪ್ರಕರಣದಲ್ಲಿ ಅಳವಡಿಸಿಕೊಂಡು, ಅವರಿಂದ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಸದರಿಯವರು ಆಕ್ಷೇಪಣೆಯನ್ನು ಸಲ್ಲಿಸಿ, ತಾನು ನಿರ್ಲಕ್ಷತನವನ್ನು ತೋರಿಸಿಲ್ಲವೆಂದು ಮತ್ತು ಮರಳಿನ ಪ್ರಮಾಣದಲ್ಲಿ ಕಂಡು ಬಂದ ವ್ಯತ್ಯಾಸಕ್ಕೆ ತಾನು ಜವಾಬ್ದಾರಿಯುತನಲ್ಲವೆಂದು, ಆದರೆ, ದಿ:22/12/2011ರ ಹರಾಜು ಪ್ರಕಟಣೆಯಲ್ಲಿ 280 ಘ.ಮೀ., ಜಪ್ತಿ ಮಾಡಿದ ಮರಳು ಸಂಗ್ರಹಿಸಲಾಗಿರುತ್ತದೆ ಎಂದು ನಮೂದಿಸಲಾಗಿರುತ್ತದೆ ಮತ್ತು ಅಷ್ಟೇ ಮರಳಿನ ಪರಿಮಾಣವು ದಿ:04/02/2014 ರಂದು ಪ್ರಕಟಿಸಿರುವ ಹರಾಜು ಪ್ರಕಟಣೆಯಲ್ಲಿ ನಮೂದಿಸಲಾಗಿರುತ್ತದೆ. ಆದರೆ, ದಿ:22/12/2011 ರಿಂದ 04/02/2014 ರವರೆಗಿನ ನಡುವಿನ ಅವಧಿಯಲ್ಲಿ ಮತ್ತೆ ಬಹಳಷ್ಟು ಮರಳು ಲೋಕೋಪಯೋಗಿ ಇಲಾಖೆಯಿಂದ ಜಪ್ತಿ ಮಾಡಲಾಗಿರುತ್ತದೆ. ಜಪ್ತಿ ಮಾಡಿರುವ ಮರಳಿನ ಪರಿಮಾಣವು ಹರಾಜು ಪ್ರಕಟಣೆಯಲ್ಲಿ ತೋರಿಸದೇ ಅವ್ಯವಹಾರ ಮಾಡಿರುವುದು ನಿಜವಿರುತ್ತದೆ ಎಂದು ತಿಳಿಸಿರುತ್ತಾರೆ.

4. ಸದರಿ ಎದುರುದಾರರುಗಳ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮರಳನ್ನು ದುರುಪಯೋಗಪಡಿಸಿಕೊಂಡು ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು, ಆದ್ದರಿಂದ, ಅವರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

5. ಈ ಹಂತದಲ್ಲಿ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು, ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರರು, ಕಟ್ಟಡ ವಿಭಾಗ, ಧಾರವಾಡ ಇವರಿಗೆ ಪತ್ರ ಬರೆದು, ಅಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ವೃಷಬೇಂದ್ರ ಮೂರ್ತಿ ಮತ್ತು ಸಹಾಯಕ ಅಭಿಯಂತರರಾದ ಶ್ರೀ ಕವಳೆಕರ್ ಇವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ಕ್ರಮ ಜರುಗಿಸಲು ತಿಳಿಸಿರುವುದಾಗಿ ಮಾಹಿತಿಯನ್ನು ನೀಡಿರುತ್ತಾರೆ. ಈ ಹಂತದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರ ಆದೇಶದಂತೆ ಸದರಿ ಶ್ರೀ ಕೆ.ಬಿ. ವೃಷಬೇಂದ್ರ ಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪವಿಭಾಗ, ಬೆಳಗಾಗಿ ಹಾಗೂ ಶ್ರೀ ಎಂ.ಎಸ್. ಕವಳೆಕರ್, ಸಹಾಯಕ ಅಭಿಯಂತರರು, ವಿಭಾಗ-2, ಲೋಕೋಪಯೋಗಿ ಇಲಾಖೆ, ಬೆಳಗಾಗಿ ಇವರ ಮೇಲಿನ ಇಲಾಖಾ ವಿಚಾರಣೆಯನ್ನು ಸ್ಥಗಿತಗೊಳಿಸಿ ಅವರ ವಿರುದ್ಧ ಮಾಡಲಾದ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಹಾಜರುಪಡಿಸುವಂತೆ ತಿಳಿಸಲಾಗಿದ್ದು, ಅದರಂತೆ, ಸರ್ಕಾರವು ಆದೇಶ ಹೊರಡಿಸಿ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಹೌಸ್‌ನಲ್ಲಿ ಶೇಖರಿಸಲಾಗಿದ್ದ ಮರಳಿನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೇ, ಸದರಿ ಮರಳು ಅಕ್ರಮವಾಗಿ ಕಾಣೆಯಾಗುವುದಕ್ಕೆ ಕಾರಣೀಭೂತರಾಗಿದ್ದು, ಸುಮಾರು ರೂ.14,90,089.50 ಮೌಲ್ಯದಷ್ಟು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಬೆಳಗಾವಿಯ ಸರ್ಕ್ಯೂಟ್ ಹೌಸ್ ಆವರಣದಲ್ಲಿ ಜಪ್ತಿಮಾಡಿ ಸಂಗ್ರಹಿಸಿದ್ದ ಮರಳು ಸದರಿ ಜಾಗದಿಂದ ಕಾಣೆಯಾಗಿರುವುದರಿಂದ, ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಮೊತ್ತವನ್ನು ಈ ದೂರು ಪ್ರಕರಣದಲ್ಲಿನ ಎದುರುದಾರರುಗಳಿಂದ ಮರಳಿ ಪಡೆಯಲು (recover) ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 9/2

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 09/2/17